ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 23-01-1970.

*ಸೇವೆಯಲ್ಲಿ ಸಫಲತೆ ಪಡೆಯುವ ಯುಕ್ತಿಗಳು* (सेवा में सफलता पाने की युक्तियाँ)

ಸೇವೆಗಾಗಿ ಅನಿವಾರ್ಯವಾಗಿ ಮಾತನಾಡಬೇಕಾಗುತ್ತದೆ ಎಂದು ಅನುಭವ ಮಾಡುತ್ತೀದ್ದೀರಾ? ಆದರೆ ಸೇವೆ ಸಮಾಪ್ತಿಯಾದಾಗ ಶಬ್ದವೂ ಸಮಾಪ್ತಿಯಾಗುವುದು. (ಮುಂಬಯಿನ ಒಂದು ಗುಂಪು ಬಾಪ್ ದಾದಾರವರಿಂದ ಅಲ್ಲಿ ನಡೆಯಲಿರುವ ಸಮ್ಮೇಳನಕ್ಕಾಗಿ ಮಾರ್ಗದರ್ಶನ ಪಡೆಯುವಾಗ) ಇತ್ತೀಚೆಗೆ ಮಾಡುತ್ತಿರುವ ಸೇವೆಯಲ್ಲಿ ಯಾವ ವಿಶೇಷತೆ ಬೇಕು? ಭಾಷಣವನ್ನಂತೂ ಹಲವಾರು ವರ್ಷಗಳಿಂದ ಮಾಡುತ್ತಿರುವಿರಿ, ಆದರೆ ಈಗ ಭಾಷಣಗಳಲ್ಲಿ ಯಾವ ಅವ್ಯಕ್ತ ಸ್ಥಿತಿ ತರಬೇಕು? ಮಾತನಾಡುವಾಗಲೂ ಸಹ, ಇವರಂತೂ ಅಶರೀರಿ, ಶಬ್ದದಿಂದ ದೂರ ನಿರ್ಲಿಪ್ತ ಸ್ಥಿತಿಯಲ್ಲಿ ಸ್ಥಿತರಾಗಿ ಮಾತನಾಡುತ್ತಿದ್ದಾರೆ ಎಂದು ಎಲ್ಲರೂ ಅನುಭವ ಮಾಡಬೇಕು. ಈಗ ಈ ಸಮ್ಮೇಳನದಲ್ಲಿ ಈ ನವೀನತೆ ಬರಬೇಕು. ಬ್ರಾಹ್ಮಣ ಭಾಷಣಕಾರರು ಮತ್ತು ಆ ಭಾಷಣಕಾರರು ದೂರದಿಂದಲೇ ಭಿನ್ನವಾಗಿ ಕಂಡುಬರಬೇಕು. ಆಗಲೇ ಸಮ್ಮೇಳನದ ಸಫಲತೆಯಾಗುತ್ತದೆ. ಅಪರಿಚಿತನೊಬ್ಬ ಪ್ರವೇಶ ಮಾಡಿದರೆ ಇವರು ಅದ್ಭುತವಾಗಿ ಮಾತನಾಡುವವರು ಎಂದು ದೂರದಿಂದಲೇ ಅನುಭವಮಾಡಬೇಕು, ಕೇವಲ ವಾಣಿಯ ಬಲ ಕಿವಿಗೆ ಖುಷಿ ಕೊಡುವಂತಹುದು ಆದರೆ ಅವ್ಯಕ್ತ ಸ್ಥಿತಿಯಲ್ಲಿ ಸ್ಥಿತರಾಗಿ ಏನನ್ನು ಮಾತನಾಡಬೇಕಾಗಿದೆಯೋ ಅದು ಕೇವಲ ಕಿವಿಗಷ್ಟೇ ಅಲ್ಲ, ಮನಸ್ಸಿಗೂ ಮುದಕೊಡುವಂತೆ ಇರಬೇಕು. ಕಿವಿಗೆ ಆನಂದವನ್ನು ಕೊಡುವವರು ಬಹಳ ಇದ್ದಾರೆ ಆದರೆ ಮನಸ್ಸಿಗೆ ಸಂತೋಷವನ್ನು ಕೊಡುವವರು ಇನ್ನೂವರೆಗೂ ಯಾರೂ ಇಲ್ಲ. ತಂದೆ ನಿಮ್ಮ ಮುಂದೆ ಪ್ರತ್ಯಕ್ಷರಾಗಿದ್ದಾರೆ ಆದರೆ ನೀವು ಹೊರಗಡೆ ಪ್ರತ್ಯಕ್ಷವಾಗಬೇಕು. ಹಾಗಾದರೆ ಈ ಸಮ್ಮೇಳನ ಸಾಧಾರಣ ರೀತಿಯಿಂದ ಆಗಬಾರದು. ಚಿತ್ರದಲ್ಲಿ ಚೈತನ್ಯತೆಯಿರಬೇಕು ಎಂದು ಮೀಟಿಂಗ್ ನಲ್ಲಿ ಹೇಳಬೇಕು. ಚೈತನ್ಯದಲ್ಲಿ ವ್ಯಕ್ತಭಾವವನ್ನು ಹೇಗೆ ಸ್ಪಷ್ಟಮಾಡುತ್ತಾರೆಯೋ ಹಾಗೆಯೇ ಚಿತ್ರ ಚೈತನ್ಯವಾಗಿ ಸಾಕ್ಷಾತ್ಕಾರವಾಗಬೇಕು. ಚಿತ್ರದಲ್ಲಿ ಚೈತನ್ಯತೆಯ ಭಾವ ಪ್ರತ್ಯಕ್ಷವಾದಾಗ, ಅದೇ ಚಿತ್ರ ಪ್ರಿಯವಾಗುತ್ತದೆ. ಕೇವಲ ಹೊರಗಡೆಯ ಚಿತ್ರದ ಸೌಂದರ್ಯದ ಮಾತಲ್ಲ, ಆದರೆ ಒಳಗೂ ಅದೇ ರೀತಿಯಿರಲಿ, ಬಾಪ್ ದಾದಾ ಇದೇ ನವೀನತೆಯನ್ನು ನೋಡಬಯಸುತ್ತಾರೆ. ಕಡಿಮೆ ಮಾತನಾಡಿದರೂ ದೊಡ್ಡ ಕರ್ತವ್ಯ ಮಾಡಿ ತೋರಿಸಬೇಕು. ಇದೇ ಬ್ರಾಹ್ಮಣರ ರೀತಿ ಪದ್ಧತಿಯಾಗಿದೆ. ಈ ಸಮ್ಮೇಳನ ಹೇಗೆ ಅಮೂಲ್ಯ ಮಾಡುವುದು ಎಂಬ ಗಮನವಿರಲಿ. ಚಿತ್ರಗಳಲ್ಲಿಯೂ ದೂರದಿಂದಲೇ ಅನುಭವ ಮಾಡಿಸುವಂತಹ ಅವ್ಯಕ್ತ ಚೈತನ್ಯತೆಯಿರಲಿ ಇಲ್ಲವಾದರೆ ಇಷ್ಟೊಂದು ಪ್ರಜೆಗಳು ಹೇಗೆ ಆಗುವರು. ಕೇವಲ ಮುಖದಿಂದ ಅಲ್ಲ ಆದರೆ ಆಂತರಿಕ ಸ್ಥಿತಿಯಿಂದ ಪ್ರಜೆಗಳಾಗುವರು, ಅದನ್ನೇ ಆಂತರಿಕ ಸುಖದ ಅನುಭವ ಎಂದು ಹೇಳುವರು. ಯಾರು ಅವ್ಯಕ್ತ ಸ್ಥಿತಿಯ ಅನುಭವದಿಂದ ಬಂದಿದ್ದರೋ ಅವರು ಆರಂಭದಿಂದ ಸಹಜ ಮತ್ತು ನಿರ್ವಿಘ್ನರಾಗಿ ಮುಂದುವರೆಯುತ್ತಿದ್ದಾರೆ ಎಂಬ ಫಲಿತಾಂಶವನ್ನು ತಾವೆಲ್ಲರೂ ನೋಡಿರುವಿರಿ. ಅವ್ಯಕ್ತ ಸ್ಥಿತಿಯ ಜೊತೆಗೆ ಮತ್ತೇನಾದರೂ ಆಧಾರವನ್ನು ತೆಗೆದುಕೊಂಡು ಹೋಗುವವರಿಗೆ ವಿಘ್ನ, ಕಷ್ಟ ಮುಂತಾದ ಕಠಿಣತೆ ಪುರುಷಾರ್ಥದಲ್ಲಿ ಕಂಡುಬರುತ್ತದೆ. ಆದ್ದರಿಂದ ಈಗ ಅವ್ಯಕ್ತ ಶಕ್ತಿಯ ಅಡಿಪಾಯದಿಂದ ಬಹಳ ಕಡಿಮೆ ಸಮಯದಲ್ಲಿ ಮತ್ತು ಸಹಜವಾಗಿ ತಮ್ಮ ಗುರಿ ಸಾಧಿಸುವಂತಹ ಪ್ರಜೆಗಳನ್ನು ತಯಾರು ಮಾಡಬೇಕು. ಎಷ್ಟು ತಾವು ಸಹಜ ಪುರುಷಾರ್ಥಿಯಾಗುತ್ತೀರೋ, ಅವ್ಯಕ್ತ ಶಕ್ತಿಯನ್ನು ಹೊಂದುತ್ತೀರೋ ಅಷ್ಟು ಬೇರೆಯವರನ್ನು ತಮ್ಮ ಸಮಾನ ಮಾಡಿಕೊಳ್ಳುವಿರಿ. ಹಾಗಾದರೆ ಈ ಸಮ್ಮೇಳನದ ಫಲಿತಾಂಶವನ್ನು ನೋಡಬೇಕು. ವಿಷಯವೇನಾದರೂ ಇರಲಿ ಆದರೆ ಸ್ಥಿತಿ ಶ್ರೇಷ್ಠವಾಗಿರಲಿ (topic-top), ಸ್ಥಿತಿ ಶ್ರೇಷ್ಠವಾಗಿದ್ದರೆ ವಿಷಯವನ್ನು ಹೇಗಾದರೂ ಬದಲಾಯಿಸಬಹುದು. ಈಗ ಭಾಷಣದ ಮೇಲಲ್ಲ ಆದರೆ ಸ್ಥಿತಿಯ ಮೇಲೆ ಸಫಲತೆ ಆಧಾರಿತವಾಗಿದೆ ಎಂದು ಹೇಳಲಾಗುತ್ತದೆ. ಏಕೆಂದರೆ ಭಾಷಣ ಎಂದರೆ ಭಾಷೆಯ ಪ್ರವೀಣತೆಯಿರುವವರು ಜಗತ್ತಿನಲ್ಲಿ ಬೇಕಾದಷ್ಟು ಜನರಿದ್ದಾರೆ. ಆದರೆ ಆತ್ಮನಲ್ಲಿ ಶಕ್ತಿಯ ಅನುಭವ ಮಾಡಿಸಬಲ್ಲವರು ನೀವೇ. ಈಗ ಇದೇ ನವೀನತೆಯನ್ನು ತರಬೇಕಾಗಿದೆ. ಯಾವಾಗಲಾದರೂ

ಯಾವುದೇ ಕಾರ್ಯ ಮಾಡುವ ಮೊದಲು ಅವ್ಯಕ್ತ ವಾಯುಮಂಡಲವನ್ನು ತಯಾರು ಮಾಡುವ ಆವಶ್ಯಕತೆಯಿದೆ. ಬೇರೆಲ್ಲ ಶೃಂಗಾರದ ಕಡೆಗೆ ಯಾವ ರೀತಿ ಗಮನವಿಡುತ್ತೀರೋ, ಆ ಶೃಂಗಾರದಲ್ಲಿ ಇದು ಮುಖ್ಯ ಶೃಂಗಾರವಾಗಿದೆ. ಆದರೆ ಆಗುತ್ತಿರುವುದೇನು? ಮಾಡುವ ಸಮಯದಲ್ಲಿ ಬಹಿರ್ಮುಖತೆ ಅಧಿಕವಾಗಿ ವಾಯುಮಂಡಲದ ಕಡೆಗೆ ಕೊನೆಯಲ್ಲಿ ಗಮನ ಬರುವ ಕಾರಣ ಬೇಕಾದ ಫಲಿತಾಂಶ ಸಿಗುವುದಿಲ್ಲ. ಹೀಗೆ ಮಾಡೋಣ, ಹಾಗೆ ಮಾಡೋಣವೆಂದು ತಾವು ಬಹಳ ಯೋಚಿಸುವಿರಿ, ಆದರೆ ಕೊನೆಯ ಸಮಯದಲ್ಲಿ ಕೆಲಸ ಜಾಸ್ತಿಯಾದುದನ್ನು ನೋಡಿ ಬಹಿರ್ಮುಖತೆಯಲ್ಲಿ ಬರುತ್ತೀರಿ. ಅದೇ ರೀತಿ ಕೇಳುವವರು ಆ ಸಮಯ ಬಹಳ ಚೆನ್ನಾಗಿದೆ ಎಂದು ಹೇಳುತ್ತಾರೆ ಆದರೆ ತಕ್ಷಣ ಬಹಿರ್ಮುಖತೆಯಲ್ಲಿ ಬರುತ್ತಾರೆ. ಆದ್ದರಿಂದ ಯಾರೇ ಬಂದರೂ ಅವ್ಯಕ್ತ ಪ್ರಭಾವದ ಅನುಭವವಾಗುವಂತಹ ಕಾರ್ಯಕ್ರಮಗಳನ್ನು ಇಟ್ಟುಕೊಳ್ಳಿ. ಸಮ್ಮೇಳನದ ಸಫಲತೆಯ ಸಾಧನ ಇದಾಗಿದೆ. ಅದೇ ದಿನ ಮಾಡಬೇಕೆಂದಲ್ಲ, ಆದರೆ ಕೆಲವು ದಿನಗಳ ಮೊದಲಿನಿಂದಲೇ ವಾಯುಮಂಡಲವನ್ನು ರೂಪಿಸಬೇಕು. ವಾಯುಮಂಡಲವನ್ನು ಶುದ್ಧ ಮಾಡಿದಾಗ ಏನಾದರೂ ನವೀನತೆ ಕಂಡು ಬರುವುದು, ಸಾಕಾರ ಶರೀರದಲ್ಲಿಯೂ ಅಲೌಕಿಕತೆ ದೂರದಿಂದಲೇ ಕಂಡುಬರುತ್ತಿತ್ತಲ್ಲವೇ? ಆದ್ದರಿಂದ ಮಕ್ಕಳ ವ್ಯಕ್ತ ಶರೀರದಿಂದ ಅಲೌಕಿಕತೆ ಕಂಡು ಬರಬೇಕು.

ಮಾಧ್ಯಮಗಳ ಮಿಲನದ ಫಲಿತಾಂಶ ಚೆನ್ನಾಗಿದ್ದರೆ ಮಾಡುವುದರಲ್ಲಿ ತೊಂದರೆಯೇನಿಲ್ಲ. ಆದರೆ ಮೊದಲು ಅವರನ್ನು ಭೇಟಿಯಾಗಿ ಅವರನ್ನೇ ಸಹಯೋಗಿಗಳನ್ನಾಗಿ ಮಾಡಿಕೊಳ್ಳುವುದು ಬಹಳ ಅವಶ್ಯಕವಾಗಿದೆ. ಆ ಸಮಯಕ್ಕೆ ಅವರಿಂದ ಕೆಲಸ ಮಾಡಿಸಿಕೊಳ್ಳುವುದಕ್ಕೂ ಮತ್ತು ಸಮಯಕ್ಕೆ ಮೊದಲೇ ಅವರನ್ನು ಸಹಯೋಗಿಗಳನ್ನಾಗಿ ಮಾಡಿಕೊಳ್ಳುವುದಕ್ಕೂ ಬಹಳ ಅಂತರವಿದೆ. ಅನೇಕ ವೇಳೆ ಆ ಸಮಯದಲ್ಲಿಯೇ ಗಮನಕ್ಕೆ ಬರುತ್ತದೆ. ತಮ್ಮ ಬುದ್ಧಿಯ ಮಾರ್ಗವನ್ನು ಸ್ಪಷ್ಟವಾಗಿಟ್ಟುಕೊಂಡರೆ ಎಲ್ಲವೂ ಸ್ಪಷ್ಟವಾಗುವುದು. ತಮ್ಮ ಚಿತ್ರ ಪ್ರದರ್ಶನಿಯಲ್ಲಿ ಸ್ವಿಚ್ ಹಾಕಿದಾಗ ಉತ್ತರ ಸಿಗುತ್ತದೆ. ಅದೇ ರೀತಿ ಪುರುಷಾರ್ಥದ ಮಾರ್ಗ ಸ್ಪಷ್ಟವಾಗಿದ್ದಾಗ ಸಂಕಲ್ಪದ ಸ್ವಿಚ್ ಒತ್ತುವುದು ಮತ್ತು ಮಾಡುವುದು. ಈ ರೀತಿ ಅನುಭವ ಮಾಡುತ್ತಾ ಹೋಗುವಿರಿ. ಕೇವಲ ವ್ಯರ್ಥ ಸಂಕಲ್ಪಗಳ ನಿಯಂತ್ರಣಾ ಶಕ್ತಿ ಬೇಕು. ವ್ಯರ್ಥ ಸಂಕಲ್ಪ ನಡೆಯುವುದರ ಕಾರಣ ಬಾಪ್ ದಾದಾರಿಂದ ಸಿಗುವ ಸಹಜ ಮತ್ತು ವಾಸ್ತವ ಪ್ರೇರಣೆಗಳು ಅಥವಾ ಶುದ್ಧ ಪ್ರತ್ಯುತ್ತರದಲ್ಲಿ ಮಿಶ್ರಣವಾಗುತ್ತದೆ ಏಕೆಂದರೆ ವ್ಯರ್ಥ ಸಂಕಲ್ಪ ಹೆಚ್ಚಿರುತ್ತವೆ. ಒಂದು ವೇಳೆ ವ್ಯರ್ಥ ಸಂಕಲ್ಪಗಳನ್ನು ನಿಯಂತ್ರಿಸುವ ಶಕ್ತಿಯಿದ್ದರೆ ಅದರಲ್ಲಿ ಕೇವಲ ತಂದೆಯ ಪ್ರೇರಣೆ ಕಂಡು ಬರುತ್ತದೆ. ಅದೇ ರೀತಿ ಪಾರದರ್ಶಕವಾಗಿದ್ದರೆ ಅದರಲ್ಲಿ ಪ್ರತಿಯೊಂದು ಮಾತು ಮಿಶ್ರಿತವಾಗಿರದೇ ಸ್ಪಷ್ಟ ಮತ್ತು ಯಥಾರ್ಥವಾಗಿರುತ್ತದೆ. ಯಾರಲ್ಲಿ ವ್ಯರ್ಥ ಸಂಕಲ್ಪಗಳು ನಡೆಯುವುದಿಲ್ಲವೋ ಅವರು ತಮ್ಮ ಅವ್ಯಕ್ತ ಸ್ಥಿತಿಯನ್ನು ಹೆಚ್ಚಿಸಿಕೊಳ್ಳುವರು. ಶುದ್ಧ ಸಂಕಲ್ಪಗಳಿರಬೇಕು ಆದರೆ ಅವುಗಳನ್ನು ನಿಯಂತ್ರಣ ಮಾಡುವ ಶಕ್ತಿಯಿರಬೇಕು. ವ್ಯರ್ಥ ಸಂಕಲ್ಪಗಳ ಚಂಡಮಾರುತವಿನ್ನೂ ಅನೇಕರಲ್ಲಿ ಬಹಳಇದೆ.

ಯಾರಾದರೂ ಯಾವುದೇ ಕಾರ್ಯವನ್ನು ಮಾಡುವಾಗ ಉದಾಹರಣೆಯನ್ನು (sample) ತುಂಬಾ ಚೆನ್ನಾಗಿ ತಯಾರು ಮಾಡುತ್ತಾರೆ. ಈ ಸಮ್ಮೇಳನದ ಸ್ಯಾಂಪಲ್ ಸಹ ಎಲ್ಲರ ಎದುರಿಗೆ ಇಡಬೇಕು. ಅವ್ಯಕ್ತ ಸ್ಥಿತಿ ಏನು ಎಂಬ ಅನುಭವ ಮಾಡಿಸಬೇಕು. ತಮ್ಮ ಚಟುವಟಿಕೆಗಳಲ್ಲಿ ಎಲ್ಲರೂ ಸಮಯದ ಗಡಿಯಾರವನ್ನು ನೋಡಬೇಕು. ಸಮಯದ ಗಡಿಯಾರವಾಗಿ ಹೋಗುತ್ತಿರುವಿರಿ, ಹೇಗೆ ಸಾಕಾರನೂ ಸಮಯದ ಗಡಿಯಾರ ಆದರಲ್ಲವೇ? ಅದೇ ರೀತಿ ಶರೀರವಿದ್ದರೂ ಅವ್ಯಕ್ತ ಸ್ಥಿತಿಯ ಗಂಟೆ ಬಾರಿಸುವಂತಹ ಗಡಿಯಾರವಾಗಬೇಕು. ಈ ಸೇವೆ ಎಲ್ಲಕ್ಕಿಂತ ಚೆನ್ನಾಗಿದೆ. ವ್ಯಕ್ತದಲ್ಲಿ ಅವ್ಯಕ್ತ ಸ್ಥಿತಿಯ ಅನುಭವ ಏನಾಗಿರುತ್ತದೆ ಎಂಬ ಪಾಠವನ್ನು ಎಲ್ಲರಿಗೂ ಪ್ರಾಯೋಗಿಕವಾಗಿ ಕಲಿಸಬೇಕು.

ಬಾಪ್ ದಾದಾ ಮತ್ತು ದೈವೀ ಪರಿವಾರದವರೆಲ್ಲರ ಸ್ನೇಹದ ಸೂತ್ರದಲ್ಲಿ ಮಣಿಯಾಗಿ ಪೋಣಿಸಲ್ಪಡಬೇಕು. ಸ್ನೇಹದ ಸೂತ್ರದಲ್ಲಿ ಪೋಣಿಸಲ್ಪಟ್ಟ ಮಣಿ ನಾನಾಗಿದ್ದೇನೆ ಎಂಬ ನಶೆಯಿರಬೇಕು. ಮಣಿಗಳನ್ನು ಎಲ್ಲಿ ಇಡಲಾಗುತ್ತದೆ? ಮಾಲೆಯಲ್ಲಿ

ಮಣಿಗಳನ್ನು ಬಹಳ ಶುದ್ಧಿಯಿಂದ ಇಡಲಾಗುತ್ತದೆ. ಅದನ್ನು ತೆಗೆಯುವುದೂ ಶುದ್ಧಿಪೂರ್ವಕವಾಗಿರುತ್ತದೆ. ನಾವು ಅದೇ ತರಹದ ಅಮೂಲ್ಯ ಮಣಿಯಾಗಿದ್ದೇವೆ ಎಂದು ತಿಳಿಯಬೇಕು. (ಕೆಲವರು ಸೇವೆಗಾಗಿ ಸಲಹೆಯನ್ನು ಕೇಳಿದರು) ಅಂತವರ ಸೇವೆ ಶಬ್ದದಿಂದ ಆಗುವುದಿಲ್ಲ ಆದರೆ ಚರಿತ್ರೆ ಪ್ರಭಾವಶಾಲಿ ಆದಾಗ ಪರಿವರ್ತನೆಯನ್ನು ನೋಡುವರು. ಆಗ ಅವರು ತಾವೇ ಆಕರ್ಷಿತರಾಗಿ ಬರುವರು. ಕೆಲವರಿಗೆ ತಮ್ಮ ಅಹಂಕಾರವಿರುತ್ತದೆಯಲ್ಲವೇ? ಆಗ ವಾಣಿಯ ಜೊತೆಗೆ ವಾಣಿಯ ಅಹಂಕಾರದ ಘರ್ಷಣೆಯಾಗುತ್ತದೆ. ಆದರೆ ಪ್ರಾಯೋಗಿಕ ಜೀವನದ ಘರ್ಷಣೆಯಲ್ಲಿ ಬರುವುದಿಲ್ಲ. ಆದ್ದರಿಂದ ಇಂತಹ ಜನರಿಗೆ ತಿಳಿಸಲು ಇದೇ ಸಾಧನವಾಗಿದೆ. ವಾಯುಮಂಡಲವನ್ನು ಅವ್ಯಕ್ತ ಮಾಡಿರಿ. ಅವರಿಗೆ ಅವ್ಯಕ್ತ ವತನ ಕಂಡುಬರುವಂತೆ ಸೇವಾಕೇಂದ್ರಗಳ ವಾಯುಮಂಡಲವನ್ನು ಆಕರ್ಷಣೀಯವಾಗಿಸಬೇಕು. ಈ ಮನೆಯಲ್ಲಿ ಒಂದು ದಿಪವಿದೆ ಎಂದು ದೂರದಿಂದಲೇ ಯಾರಾದರೂ ನೋಡಿದರೆ ಅನುಭವಕ್ಕೆ ಬರಬೇಕು. ದೀಪ ದೂರದಿಂದಲೇ ಬೆಳಕು ಕೊಡುತ್ತದೆ. ತನ್ನೆಡೆಗೆ ಆಕರ್ಷಿಸುತ್ತದೆ. ಆದ್ದರಿಂದ ದೀಪ ದಂತೆ ನೀವು ಹೊಳೆಯುವುದನ್ನು ಕಂಡು ಜನ ಬಂದರೆ ಅದು ಸಫಲತೆಯಾಗಿದೆ.

ಅವ್ಯಕ್ತ ಭಟ್ಟಿಯಲ್ಲಿ ಬಂದು ಅವ್ಯಕ್ತ ಸ್ಥಿತಿಯ ಅನುಭವ ಆಗುತ್ತದೆಯಾ? ಇಲ್ಲಿ ಆಗುವಂತಹ ಅನುಭವವನ್ನು ಅವರಿಗೆ ಹೇಗೆ ಮಾಡಿಸುವಿರಿ? ಜೊತೆಗೆ ತೆಗೆದುಕೊಂಡು ಹೋಗುವಿರೋ ಅಥವಾ ಇಲ್ಲಿಯೇ ಬಿಟ್ಟು ಹೋಗುವಿರೋ? ಈ ಅವ್ಯಕ್ತ ಆಕರ್ಷಣೆಯ ಜೊತೆಯನ್ನು ಬಿಡಲು ಬಯಸಿದರೂ ಬಿಟ್ಟು ಹೋಗದಂತಹ ಜೊತೆಗಾರರನ್ನಾಗಿ ಅವರನ್ನು ಮಾಡಿಕೊಳ್ಳಿ. ಲೌಕಿಕ ಪರಿವಾರವನ್ನು ಸ್ವಲ್ಪವೂ ಲೌಕಿಕತೆ ಇಲ್ಲದಿರುವಂತಹ ಅಲೌಕಿಕ ಪರಿವಾರವಾಗಿ ಮಾಡಿ, ಹೇಗೆ ಒಂದು ಶರೀರವನ್ನು ಬಿಟ್ಟು ಇನ್ನೊಂದನ್ನು ಪಡೆದಾಗ ಆ ಜನ್ಮದ ಯಾವ ಮಾತೂ ಸ್ಮೃತಿಯಲ್ಲಿ ಇರುವುದಿಲ್ಲವೋ. ಹಾಗೆಯೇ ಇದು ಕೂಡ ಮರುಜನ್ಮ (ಮರಜೀವ) ಆಗಿದೆಯಲ್ಲವೇ? ಹಾಗಾದರೆ ಹಿಂದಿನ ಜೀವನದ ಸ್ಮೃತಿ ಮತ್ತು ದೃಷ್ಟಿ ಅದೇ ರೀತಿ ನಾಶವಾಗಬೇಕು. ಲೌಕಿಕದಲ್ಲಿ ಅಲೌಕಿಕತೆಯನ್ನು ತುಂಬುವುದರಿಂದ ಅಲೌಕಿಕ ಸೇವೆ ಆಗುತ್ತದೆ. ಯಾವ ಅಲೌಕಿಕ ಸೇವೆ ಮಾಡುತ್ತಿರುವಿರಿ? ಆತ್ಮನ ಸಂಬಂಧವನ್ನು ಪಾವರ್ ಹೌಸ್ ಜೊತೆಗೆ ಜೋಡಿಸುವ ಸೇವೆ ಮಾಡುತ್ತಿರುವಿರಿ, **ಒಂದು ತಂತಿಯನ್ನು ಇನ್ನೊಂದು ತಂತಿಯ ಜೊತೆಗೆ ಜೋಡಿಸುವಾಗ ಮೇಲಿನ ರಬ್ಬರನ್ನು ತೆಗೆಯಬೇಕಾಗುತ್ತದೆ. ಅದೇ ರೀತಿ ತಮ್ಮನ್ನು ಆತ್ಮ ಎಂದು ತಿಳಿದು ಶರೀರದ ಭಾವನೆಯಿಂದ ಬೇರೆಯಾಗುವುದು ಸಹ ತಮ್ಮ ಮೊದಲ ಕರ್ತವ್ಯವಾಗಿದೆ**. ಇಲ್ಲಿಯ ಮುಖ್ಯ ವಿಷಯಗಳು ಎಷ್ಟು ಮತ್ತು ಯಾವವು? ಮುಖ್ಯ ವಿಷಯಗಳು ನಾಲ್ಕು, ಜ್ಞಾನ, ಯೋಗ, ಧಾರಣೆ ಮತ್ತು ಸೇವೆ. ಇದರಲ್ಲಿಯೂ ಮುಖ್ಯವಾದವು ಯಾವವು? ಇಲ್ಲಿಂದಲೇ ಶಾಂತಿಯನ್ನು ಸಂಗ್ರಹ ಮಾಡಿಕೊಂಡು ಹೋಗುತ್ತಿರುವಿರಾ? ಆಶೀರ್ವಾದ ಹೇಗೆ ಸಿಗುತ್ತದೆ ಎಂದು ಗೊತ್ತಿದೆಯಾ? ಎಷ್ಟೆಷ್ಟು ಆತ್ಮಭಿಮಾನಿ ಆಗುವಿರೋ ಅಷ್ಟಷ್ಟು ಆಶೀರ್ವಾದ ಬಯಸದೇ ಇದ್ದರೂ ಸಿಗುತ್ತದೆ. ಇಲ್ಲಿ ಸ್ಥೂಲವಾಗಿ ಯಾವ ಆಶೀರ್ವಾದ ಸಿಗುವುದಿಲ್ಲ. ಸ್ವತಃ ಸಿಗುತ್ತದೆ. ಬಾಪ್ ದಾದಾರ ಆಶೀರ್ವಾದವಿಲ್ಲದಿದ್ದರೆ ಇಲ್ಲಿಯವರೆಗೆ ಹೇಗೆ ಬರುತ್ತಿದ್ದಿರಿ? ಪ್ರತಿ ಕ್ಷಣ ಬಾಪ್ ದಾದಾ ಮಕ್ಕಳಿಗೆ ಆಶೀರ್ವಾದ ಕೊಡುತ್ತಿದ್ದಾರೆ. ಆದರೆ ತೆಗೆದುಕೊಳ್ಳುವವರು ಎಷ್ಟು ತೆಗೆದುಕೊಳ್ಳುವರೋ ಅಷ್ಟೇ ತಮ್ಮ ಬಳಿ ಕಾಯಂ ಇಟ್ಟುಕೊಳ್ಳುವರು.

ತಮಗೆ ಮತ್ತೆ ಯಾರಾದರೂ ಯುಗಲ್ ಇದ್ದಾರೆಯೇ? ಸದಾ ಜೊತೆಗಿರುವ ಯುಗಲ್ ಯಾರು? **ಇಲ್ಲಿ ಸದಾ ಯುಗಲ್(ದಂಪತಿ) ರೂಪದಲ್ಲಿದ್ದರೆ ಅಲ್ಲಿಯೂ ಸಹ ಯುಗಲ್ ರೂಪದಲ್ಲಿ ರಾಜ್ಯ ಮಾಡುವಿರಿ, ಆದ್ದರಿಂದ ಯುಗಲ್ ನನ್ನು ಎಂದೂ ಬೇರೆ ಮಾಡಬೇಡಿ.** ಹೇಗೆ ಚತುರ್ಭುಜ (combined) ಸಂಯುಕ್ತವಾಗಿರುತ್ತಾರೋ ಹಾಗೆ ತಂದೆಯೂ ಕಂಬೈನ್ಡ್ ಆಗಿದ್ದಾರೆ. ಶಿವತಂದೆಯನ್ನು ಎಂದಿಗೂ ತಮ್ಮಿಂದ ಬೇರೆ ಮಾಡಬೇಡಿ. 84 ಜನ್ಮಗಳ 84 ಯುಗಲ್ ಗಳಲ್ಲಿ ಇಂತಹ ಯುಗಲ್ ಎಂದಾದರೂ ಸಿಕ್ಕಿರುವರೇ? ಹಾಗಾದರೆ ಕಲ್ಪದಲ್ಲಿ ಒಂದು ಬಾರಿ ಸಿಗುವಂತಹವರನ್ನು ಪೂರ್ಣ ಜೊತೆಗೆ ಇಟ್ಟುಕೊಳ್ಳಬೇಕಲ್ಲವೇ? ಈಗ ನಾನು ಒಂಟಿಯಾಗಿಲ್ಲ, ಯುಗಲ್ ಆಗಿದ್ದೇನೆ ಎಂದು ನೆನಪಿಟ್ಟುಕೊಳ್ಳಿ. ಸ್ಥೂಲ ಕಾರ್ಯಗಳಲ್ಲಿ ಹೇಗೆ ಪರಿಶ್ರಮಿಯಾಗಿರುವಿರೋ ಹಾಗೆಯೇ ಯಾವುದೇ ಪರಿಸ್ಥಿತಿಯಲ್ಲಿಯೂ ಕರಗದಿರುವಂತೆ ಮನಸ್ಸಿನ ಸ್ಥಿತಿಯಲ್ಲಿಯೂ ಗಟ್ಟಿಯಾಗಿರಬೇಕು. ಗಟ್ಟಿಯಾದ ವಸ್ತು ಕರಗುವುದಿಲ್ಲ. ಅದೇ ಸ್ಥಿತಿ ಮತ್ತು ಕರ್ಮ ಎರಡೂ ಗಟ್ಟಿಯಾಗಿರಲಿ, ಯಾರೊಂದಿಗೆ ಅತಿ ಸ್ನೇಹವಿರುತ್ತದೆಯೋ ಅವರನ್ನು

ಜೊತೆಗಿಟ್ಟುಕೊಳ್ಳಲಾಗುತ್ತದೆ. ಹಾಗಾದರೆ ಸದಾ ನಾನು ಯುಗಲ್ ಮೂರ್ತಿಯಾಗಿದ್ದೇನೆ ಎಂದು ನೆನಪಿಟ್ಟುಕೊಳ್ಳಿ, ಯುಗಲ್ ಜೊತೆಗಿದ್ದರೆ ಮಾಯೆ ಬರುವುದಿಲ್ಲ. ಯುಗಲ್ ಮೂರ್ತಿ ಎಂದು ತಿಳಿಯುವುದೇ ಅತಿ ದೊಡ್ಡ ಯುಕ್ತಿಯಾಗಿದೆ. ಹೆಜ್ಜೆ ಹೆಜ್ಜೆಗೂ ಜೊತೆಗಿರುವ ಕಾರಣ ಸಾಹಸವಿರುತ್ತದೆ, ಶಕ್ತಿಯಿರುತ್ತದೆ ಆಗ ಮಾಯೆ ಬರುವುದಿಲ್ಲ.

ನಿಮ್ಮ ಹೆಸರು (ಶ್ರೀನಿವಾಸ್) ಪುರುಷಾರ್ಥ ಮತ್ತು ಪ್ರಾಪ್ತಿ ಎರಡರ ಸ್ಮೃತಿಯನ್ನು ಕೊಡಿಸುತ್ತದೆ ಶ್ರೀಯಾಗಿ ಯಾವಾಗ ತಯಾರಾಗುತ್ತೀರಿ? ಶ್ರೀ ಎಂಬುವುದು ದೇವತೆಗಳ ಬಿರುದು ಎಂದರೆ ಅದು ಭವಿಷ್ಯ ಸ್ಮೃತಿ ಮತ್ತು ನಿವಾಸ ಎಂದರೆ ನಿವಾಸ ಸ್ಥಾನ ಯಾವುದು? ನಿವಾಸ ಎಂಬ ಮಾತಿನಿಂದ ಆತ್ಮಿಕ ರೂಪದ ಸ್ಮೃತಿ ಬರುತ್ತದೆ. ಆದ್ದರಿಂದ ಶ್ರೀಯೊಂದಿಗೆ ಭವಿಷ್ಯ ಪದವಿಯ ಸ್ಮೃತಿಯನ್ನು ಕೊಡಿಸುತ್ತದೆ ಮತ್ತು ನಿವಾಸ ಸ್ಮೃತಿಯಲ್ಲಿ ಇರುವುದರಿಂದ ನಿಮ್ಮ ಸ್ವರೂಪ ಸ್ಮೃತಿಯಲ್ಲಿ ಇರುತ್ತದೆ. ಆದ್ದರಿಂದ ಶ್ರೇಷ್ಠವಾಗಿ ತಯಾರಾಗಬೇಕು ಮತ್ತು ಯಾವ ಮನೆಯಿಂದ ಬಂದಿರುವಿರೋ ಅಲ್ಲಿಗೆ ಹಿಂತಿರುಗಿ ಹೋಗಬೇಕು ಎಂಬ ಪಕ್ಕಾ ಸ್ಮೃತಿಯನ್ನು ಇಟ್ಟುಕೊಳ್ಳಬೇಕು. ನೀವು ಈಶ್ವರೀಯ ವಿದ್ಯಾರ್ಥಿಗಳಾಗಿದ್ದೀರಾ? ಡಬಲ್ ವಿದ್ಯಾರ್ಥಿಗಳಾಗಿ ಮುಂದೆ ಯಾವ ಗುರಿಯನ್ನಿಟ್ಟುಕೊಂಡಿರುವಿರಿ? ಉಚ್ಚ ಪದವಿ ಎಂದು ಯಾವುದನ್ನು ತಿಳಿದುಕೊಂಡಿರುವಿರಿ? ಲಕ್ಷ್ಮೀನಾರಾಯಣರಾಗುವಿರಾ? ಯಾವ ಗುರಿಯನ್ನು ಇಟ್ಟುಕೊಳ್ಳಲಾಗುತ್ತದೆಯೋ ಅದರ ಜೊತೆಗೆ ಯಾವ ಧಾರಣೆಯಾಗಬೇಕು? ಲಕ್ಷಣ ಅರ್ಥಾಥ್ ದೈವೀ ಗುಣ. ಎಷ್ಟು ಉನ್ನತ ಗುರಿಯನ್ನಿಟ್ಟುಕೊಂಡರೆ ಅಷ್ಟೇ ಉನ್ನತವಾದ ಲಕ್ಷಣಗಳ ಕಡೆಗೆ ಗಮನವಿರಬೇಕು. ಚಿಕ್ಕ ಕುಮಾರಿಯರು ಬಹಳ ದೊಡ್ಡ ಕೆಲಸ ಮಾಡಬಹುದು. ತಮ್ಮ ಪ್ರಾಯೋಗಿಕ ಸ್ಥಿತಿಯಲ್ಲಿ ಸ್ಥಿತರಾಗಿ ಯಾರಿಗಾದರೂ ಹೇಳಿದರೆ ಅದರ ಪರಿಣಾಮ ದೊಡ್ಡವರಿಗಿಂತಲೂ ಜಾಸ್ತಿಯಾಗುವುದು. ಚಿಕ್ಕವಳಾದ ನಾನು ಬಹಳ ದೊಡ್ಡ ಕರ್ತವ್ಯ ಮಾಡಿ ತೋರಿಸಬೇಕು ಎಂಬ ಲಕ್ಷ್ಯವನ್ನು ಸದಾ ಇಟ್ಟುಕೊಳ್ಳಬೇಕು. ದೇಹ ಚಿಕ್ಕದಾಗಿದೆ ಆದರೆ ಆತ್ಮದ ಶಕ್ತಿ ದೊಡ್ಡದಿದೆ. ಯಾರು ಹೆಚ್ಚು ಪುರುಷಾರ್ಥ ಮಾಡುವ ಇಚ್ಛೆ ಇಟ್ಟುಕೊಳ್ಳುತ್ತಾರೋ ಅವರಿಗೆ ಸಹಯೋಗವೂ ಸಿಗುತ್ತದೆ. ಕೇವಲ ತಮ್ಮ ಇಚ್ಛೆಯನ್ನು ಧೃಡವಾಗಿಟ್ಟುಕೊಳ್ಳಿ, ಆಗ ಸಹಯೋಗವೂ ಧೃಡವಾದದ್ದೇ ಸಿಗುವುದು, ಯಾರು ಎಷ್ಟೇ ಅಲುಗಾಡಿಸಿದರೂ ಸಂಕಲ್ಪವನ್ನು ಪಕ್ಕಾ ಇಟ್ಟುಕೊಳ್ಳಿ, ಸಂಕಲ್ಪ ಪಕ್ಕಾ ಇದ್ದಾಗ ಸೃಷ್ಟಿಯೂ ಹಾಗೆಯೇ ಇರುವುದು. ದೈಹಿಕ ಸೇವೆಯನ್ನೂ(ಉದ್ಯೋಗ) ಮಾಡುತ್ತಿರಿ, ಅದೂ ಒಂದು ಸಾಧನವಾಗಿದೆ ಅದರಿಂದಲೂ ಸೇವೆ ಮಾಡಬಹುದು. ಈ ಸೇವೆಯ ಸಂಬಂಧದಲ್ಲಿ ಯಾರೆಲ್ಲಾ ಆತ್ಮರು ಬರುವರೋ ಅವರಿಗೆ ಸಂದೇಶ ಕೊಡುವ ಸಾಧನವಾಗಿದೆ ಎಂದು ತಿಳಿದುಕೊಳ್ಳಿ, ಹೇಗೆ ಇಲ್ಲಿಯೂ ಯಾರು ಬಂದರೂ ಅವರನ್ನೇ ಸೇವೆಗಾಗಿ ಸಂಬಂಧಿಕರ ಕಡೆಗೆ ಕಳಿಸಿದರಲ್ಲವೇ? ಅದೇ ರೀತಿ ಸೇವೆಗಾಗಿ ಈ ಸ್ಥೂಲ ಸೇವೆಯನ್ನು ಮಾಡುತ್ತಿರುವೆವು ಎಂದು ತಿಳಿಯಿರಿ. ಆಗ ಮನಸ್ಸು ಅದರಲ್ಲಿ ತೊಡಗುವುದು ಮತ್ತು ಸಂಪಾದನೆಯೂ ಆಗುವುದು. ಲೌಕಿಕವನ್ನು ಅಲೌಕಿಕವೆಂದು ತಿಳಿದು ಮಾಡಿ, ನಂತರ ಬೇರೆ ವಾತಾವರಣದಲ್ಲಿ ಬರುವುದಿಲ್ಲ. ಹೇಗೆ ಅವ್ಯಕ್ತ ಸ್ಥಿತಿ ತಯಾರಾಗುತ್ತಾ ಹೋಗುವುದೋ ಹಾಗೆ ಮಾತನಾಡುವುದೂ ಕಡಿಮೆಯಾಗುವುದು. ಕಡಿಮೆ ಮಾತನಾಡುವುದರಿಂದ ಹೆಚ್ಚು ಲಾಭವಿದೆ, ನಂತರ ಈ ಯೋಗದ ಶಕ್ತಿಯಿಂದ ಸೇವೆ ಮಾಡುವಿರಿ, ಯೋಗಬಲ ಮತ್ತು ಜ್ಞಾನಬಲ ಎರಡೂ ಜೊತೆಗಿರುತ್ತವೆ. ಈಗ ಜ್ಞಾನಬಲದಿಂದ ಸೇವೆಯಾಗುತ್ತಿದೆ. ಯೋಗಬಲ ಗುಪ್ತವಾಗಿದೆ ಆದರೆ ಎಷ್ಟು ಯೋಗಬಲ ಮತ್ತು ಜ್ಞಾನಬಲ ಎರಡೂ ಸಮಾನವಾಗುವವೋ ಅಷ್ಟು ಸಫಲತೆ ಸಿಗುವುದು. ಇಡೀ ದಿನದಲ್ಲಿ ಯೋಗಬಲ ಎಷ್ಟಿತ್ತು, ಜ್ಞಾನಬಲ ಎಷ್ಟಿತ್ತು ಎಂದು ಪರಿಶೀಲನೆ ಮಾಡಿಕೊಳ್ಳಿ, ನಂತರ ಅಂತರ ಎಷ್ಟಿದೆ ಎಂದು ಗೊತ್ತಾಗುವುದು. ಸೇವೆಯಲ್ಲಿ ವ್ಯಸ್ತರಾದಾಗ ವಿಘ್ನಗಳು ಕೂಡಾ ದೂರವಾಗುವವು. ಧೃಡ ನಿಶ್ಚಯದ ಮುಂದೆ ಯಾವುದೇ ಅಡೆತಡೆ ಬರುವುದಿಲ್ಲ. ಚೆನ್ನಾಗಿ ಹೋಗುತ್ತಿರುವಿರಿ, ದಣಿಯದಿರುವುದು, ಮತ್ತು ಏಕರಸತೆ ಎರಡೂ ಗುಣಗಳು ಇವೆ. ಸದಾ ತಂದೆಯನ್ನು ಅನುಸರಿಸಿ, ಸಾಕಾರ ರೂಪದಲ್ಲಿಯೂ ದಣಿಯದಿರುವುದು ಮತ್ತು ಏಕರಸತೆಯ ಉದಾಹರಣೆಯಾಗಿ ಹೇಗೆ ತೋರಿಸಿದರೋ ಹಾಗೆಯೇ ಬೇರೆಯವರಿಗೆ ಉದಾಹರಣೆಯಾಗಿ, ಇದೇ ಸೇವೆಯಾಗಿದೆ, ಸೇವೆಗೆ ಸಮಯ ಸಿಗದಿರಬಹುದು ಆದರೆ ಚರಿತ್ರೆಯೂ ಸೇವೆಯಾಗುತ್ತದೆ. ಕೇವಲ ವಾಣಿಯಿಂದಲ್ಲ, ಚರಿತ್ರೆಯಿಂದಲೂ ಸೇವೆಯಾಗುತ್ತದೆ. ತಮ್ಮ ಚರಿತ್ರೆ ಆ ವಿಚಿತ್ರ ತಂದೆಯ ನೆನಪನ್ನು ಕೊಡಲಿ, ಇದು ಸಹಜ ಸೇವೆಯಾಗಿದೆಯಲ್ಲವೇ? ಸ್ನೇಹದ ಚಿಹ್ನೆಯಾಗಿ ಅನೇಕರು ತಮ್ಮ ಗುರುವಿನ ಅಥವಾ ಪತ್ನಿ ತನ್ನ ಪತಿಯ

ಫೋಟೋ ಲಾಕೆಟ್ ನಲ್ಲಿ ಹಾಕಿಕೊಳ್ಳುತ್ತಾರೆ, ಅದೇ ರೀತಿ ನಿಮ್ಮ ಈ ಮಸ್ತಕ ಆ ವಿಚಿತ್ರನ ಚರಿತ್ರೆಯನ್ನು ತೋರಿಸಲಿ, ಈ ಕಣ್ಣುಗಳು ಆ ವಿಚಿತ್ರನ ಚಿತ್ರ ತೋರಿಸಲಿ. ಇಂತಹ ಅವಿನಾಶಿ ಲಾಕೆಟ್ ಧರಿಸಿ, ತಮ್ಮ ಸ್ಮೃತಿಯೂ ಇರುವುದು ಮತ್ತು ಸೇವೆಯೂ ಆಗುವುದು.

ಮಧುಬನಕ್ಕೆ ಬಂದು ಯಾವ ಮುಖ್ಯವಾದ ಕರ್ತವ್ಯ ನಿರ್ವಹಿಸಿರುವಿರಿ? ಗಣಿಗೆ ಹೋಗಿ ಯಾರಾದರೂ ಏನು ಮಾಡುತ್ತಾರೆ? ಗಣಿಯಿಂದ ಕೇವಲ ಸ್ವಲ್ಪ ಅಲ್ಲ, ಎಷ್ಟು ಸಾಧ್ಯವೋ ಅಷ್ಟು ಖಜಾನೆಯನ್ನು ತೆಗೆದುಕೊಳ್ಳಲಾಗುವುದು. ಅದೇ ರೀತಿ ಮಧುಬವೂ ಸರ್ವಪ್ರಾಪ್ತಿಗಳ ಗಣಿ, ಹಾಗಾದರೆ ತಾವು ಗಣಿಗೆ ಬಂದಿರುವಿರಲ್ಲವೇ? ಸೇವಾಕೇಂದ್ರ ಈ ಗಣಿಯ ಶಾಖೆಯಾಗಿದೆ, ಗಣಿಗೆ ಹೋಗುವಾಗ ಎಷ್ಟು ತೆಗೆದುಕೊಳ್ಳಲು ಸಾಧ್ಯ ಎಂದು ವಿಚಾರ ನಡೆಯುತ್ತದೆ. ಆದ್ದರಿಂದ ಇಲ್ಲಿಯೂ ಎಷ್ಟು ತೆಗೆದುಕೊಳ್ಳಲು ಸಾಧ್ಯವೋ ಅಷ್ಟನ್ನು ತೆಗೆದುಕೊಳ್ಳಿ. ಇಲ್ಲಿಯ ಒಂದೊಂದು ವಸ್ತು, ಒಂದೊಂದು ಬ್ರಾಹ್ಮಣ ಆತ್ಮ ಬಹಳ ಶಿಕ್ಷಣ ಮತ್ತು ಶಕ್ತಿ ಕೊಡುವಂತಹದ್ದಾಗಿದೆ. ಯಾರೇ ಬರಲಿ ಅವರು ಅಲ್ಪಸ್ವಲ್ಪವಲ್ಲ ಆದರೆ ಎಲ್ಲವನ್ನೂ ತೆಗೆದುಕೊಳ್ಳಲಿ ಎಂದು ಬಾಪ್ ದಾದಾ ಬಯಸುತ್ತಾರೆ. ಬಾಪ್ ದಾದಾರ ಸ್ನೇಹ ಮಕ್ಕಳ ಮೇಲೆ ಇರುವುದರಿಂದ ಒಬ್ಬೊಬ್ಬರನ್ನು ಸಂಪನ್ನ ಮಾಡಲು ಬಯಸುತ್ತಾರೆ. ಎಷ್ಟು ಇಲ್ಲಿ ಪಡೆದು ಸಂಪನ್ನರಾಗುವಿರೋ ಅಷ್ಟು ಭವಿಷ್ಯದಲ್ಲಿ ರಾಜ್ಯ ಪಡೆಯಲು ಸಂಪನ್ನರಾಗುವಿರಿ. ಆದ್ದರಿಂದ ಒಂದು ಕ್ಷಣವೂ ಈ ಅಮೂಲ್ಯ ದಿನಗಳನ್ನು ವ್ಯರ್ಥವಾಗಿ ಕಳೆದುಕೊಳ್ಳಬೇಡಿ. ಒಂದೊಂದು ಕ್ಷಣದಲ್ಲಿ ಪದಮದಷ್ಟು ಸಂಪಾದನೆ ಮಾಡಬಹುದು.ಈ ಭೂಮಿಯನ್ನು ತಲುಪಿದವರೆಲ್ಲ ಪದಮದಷ್ಟು ಸೌಭಾಗ್ಯಶಾಲಿಗಳಾಗಿದ್ದೀರಿ. ಆದರೆ ಈ ಪದಮದಷ್ಟು ಭಾಗ್ಯವನ್ನು ಸದಾ ಕಾಯಂ ಇಟ್ಟುಕೊಳ್ಳಲು ಸದಾ ಸಂಪೂರ್ಣತೆಯ ಪುರುಷಾರ್ಥವನ್ನು ಮಾಡಬೇಕು. ಹೇಗೆ ಬೀಜವೋ ಹಾಗೆ ಫಲ ಬರುತ್ತದೆ. ತಾವು ಬೀಜದಂತೆ, ಅಡಿಪಾಯ ಎಷ್ಟು ಶಕ್ತಿಶಾಲಿಯಾಗಿರುವುದೋ ಅಷ್ಟು ಕಟ್ಟಡ ಪಕ್ಕಾ ಆಗಿರುತ್ತದೆ. ಆದ್ದರಿಂದ ಸದಾ ನಾವು ಅಡಿಪಾಯವಾಗಿದ್ದೇವೆ ಎಂದು ತಿಳಿದುಕೊಳ್ಳಿ. ನಮ್ಮ ಮೇಲೆ ಇಡೀ ಕಟ್ಟಡದ ಆಧಾರವಿದೆ.

ನೆನಪಿಗೆ ಪ್ರತ್ಯುತ್ತರ ಸಿಗುತ್ತದೆಯೇ? ಬಾಪ್ ದಾದಾ ಈಗ ಎಲ್ಲರ ಜೊತೆಗೆ ಇದ್ದಾರೆ, ಏಕೆಂದರೆ ಸಾಕಾರದಲ್ಲಿ ಒಂದು ಸ್ಥಾನದಲ್ಲಿ ಜೊತೆಗೆ ಇರಬಹುದಾಗಿತ್ತು. ಈಗ ಎಲ್ಲರ ಜೊತೆಗೆ ಇರಬಹುದು. ಸದಾ ಒಂದೇ ಮತದಲ್ಲಿ ಇರುವುದರಿಂದ ಒಂದೇ ಫಲಿತಾಂಶವಿರುತ್ತದೆ ಎಂದು ಗಮನದಲ್ಲಿಟ್ಟುಕೊಳ್ಳಿ. ಈ ಗುಣವನ್ನು ಪರಿವರ್ತನೆಯಲ್ಲಿ ತನ್ನಿ, ಎಂತಹದೇ ಪರಿಸ್ಥಿತಿ ಬರಲಿ ತಮ್ಮನ್ನು ಗಟ್ಟಿ (ಸಶಕ್ತ) ಯಾಗಿಟ್ಟುಕೊಳ್ಳಬೇಕು, ಬೇರೆಯವರಿಗೆ ತಮ್ಮ ಗುಣಗಳನ್ನು ದಾನ ಮಾಡಬೇಕು. ದಾನ ಮಾಡುವುದರಿಂದ ಹೇಗೆ ಭವಿಷ್ಯದಲ್ಲಿ ಪ್ರಾಪ್ತಿಯಾಗುತ್ತದೆಯೋ? ಹಾಗೆಯೇ ಗುಣದಾನ ಮಾಡುವುದರಿಂದ ಉನ್ನತ ಪ್ರಾಲಬ್ಧ ಸಿಗುತ್ತದೆ. ಏಕಮತ ಇರುವವರು ಒಬ್ಬನಿಗೆ ಪ್ರಿಯರಾಗುತ್ತಾರೆ. ಬಾಪ್ ದಾದಾ ಇಬ್ಬರಾಗಿದ್ದರೂ ಒಬ್ಬರಾಗಿರುವ ಹಾಗೆ ಎಷ್ಟೇ ಜನರಿದ್ದರೂ ಒಂದೇ ಮತದಂತೆ ನಡೆಯಬೇಕು. ತಂದೆಯ ಮನೆಗೆ ಬಂದು ಖಜಾನೆ ಪಡೆದಿದ್ದೀರಾ? ತಂದೆಯ ಮನೆ ವಿಶೇಷತೆಗಳಿಂದ ತುಂಬಿದೆಯಲ್ಲವೇ? ತಮ್ಮ ಮನೆಯಲ್ಲಿ ನಿಜ ಸ್ವರೂಪದಲ್ಲಿ ಸ್ಥಿತರಾಗಲು ಬಂದಿರುವಿರಿ, ತಮ್ಮ ಮೂಲ ಸ್ವರೂಪ ಮತ್ತು ಮೂಲ ಸ್ಥಿತಿ ಏನಾಗಿದೆ ಅದು ನೆನಪಾಗುತ್ತದೆಯೇ? ಆತ್ಮನ ಮೂಲ ಸ್ಥಿತಿ ಯಾವುದು? ಮೊದಲು ಆತ್ಮ ಪರಂಧಾಮದ ನಿವಾಸಿ, ಸರ್ವ ಗುಣಗಳ ಸ್ವರೂಪವಾಗಿದೆ. ಅದೇ ರೀತಿ ಇಲ್ಲಿಯೂ ತಮ್ಮ ಸ್ಥಿತಿಯ ಅನುಭವ ಮಾಡಲು ಬಂದಿರುವಿರಿ. ಆ ಸ್ಥಿತಿಯ ಪರಿಶೀಲನೆಗಾಗಿ ಮಧುಭನಕ್ಕೆ ಬಂದಿರುವಿರಿ. ನಂತರ ಅದನ್ನು ಸದಾಕಾಲಕ್ಕೂ ತಮ್ಮದನ್ನಾಗಿಸಿಕೊಳ್ಳಿ. ಇದರ ಹೆಸರೇ ಮಧುಬನವಾಗಿದೆ. ಮಧು ಎಂದರೆ ಮಧುರತೆ ಅರ್ಥಾತ್ ಸ್ನೇಹ ಮತ್ತು ಶಕ್ತಿಗಳೆರಡನ್ನು ವರದಾನದ ರೂಪದಲ್ಲಿ ಪೂರ್ಣ ಪ್ರಾಪ್ತಿಮಾಡಿಕೊಳ್ಳುವುದು. ಮಧುಬನದಲ್ಲಿ ಈ ಎರಡೂ ಗುಣಗಳು ವರದಾನದ ರೂಪದಲ್ಲಿ ಸಿಗುತ್ತವೆ. ಇಲ್ಲಿಂದ ಹೊರಗೆ ಹೋದಾಗ ಈ ಎರಡೂ ಗುಣಗಳಿಗಾಗಿ ಪುರುಷಾರ್ಥ ಮಾಡಬೇಕಾಗುವುದು. ಆದ್ದರಿಂದ ಇಲ್ಲಿ ವರದಾನದ ರೂಪದಲ್ಲಿ ಸಿಗುವಂತಹುದನ್ನು ಅವಿನಾಶಿಯಾಗುವಂತೆ ಮಾಡಿಕೊಳ್ಳಿ, ವರದಾನದ ರೂಪದಲ್ಲಿ ಸಿಗುವಾಗ ಅದನ್ನು ಪುರುಷಾರ್ಥ ಮಾಡಿ ಏಕೆ ಪಡೆಯಬೇಕು? ಗುರು ವರದಾನ ಕೊಡುವಾಗ ಏನು ಮಾಡಬೇಕು? ತಮ್ಮನ್ನು ಆತನಿಗೆ ಅರ್ಪಣೆ ಮಾಡಿಕೊಳ್ಳಬೇಕು, ಆಗ ವರದಾನ ಪ್ರಾಪ್ತಿಯಾಗುತ್ತದೆ. ಇಲ್ಲಿಯೂ ಎಷ್ಟು ತಮ್ಮನ್ನು ತಾವು ಅರ್ಪಣೆ ಮಾಡಿಕೊಳ್ಳುವಿರೋ ಅಷ್ಟು ವರದಾನ ಪ್ರಾಪ್ತಿಯಾಗುವುದು, ವರದಾನ ಎಲ್ಲರಿಗೂ ಸಿಗುತ್ತವೆ, ಆದರೆ ಯಾರು ಹೆಚ್ಚು ತಮ್ಮನ್ನು

ಅರ್ಪಣೆ ಮಾಡಿಕೊಳ್ಳುತ್ತಾರೋ, ಅಷ್ಟು ವರದಾನಕ್ಕೆ ಯೋಗ್ಯರಾಗುತ್ತಾರೆ. ಎಂದೂ ಖಾಲಿಯಾಗದ ರೀತಿ ಜೋಳಿಗೆಯನ್ನು ವರದಾನಗಳಿಂದ ತುಂಬಿಕೊಳ್ಳಿ, ಯಾರು ಎಷ್ಟು ತುಂಬಿಕೊಳ್ಳಲು ಬಯಸುವರೋ ಅಷ್ಟನ್ನು ತುಂಬಿಕೊಳ್ಳಬಹುದು. ಹೀಗೆ ಗಮನದಲ್ಲಿಟ್ಟುಕೊಂಡು ಈ ಕೆಲವು ದಿನಗಳಲ್ಲಿ ದಣಿಯದೇ ಲಾಭ ಪಡೆಯಿರಿ, ಇವು ಒಂದೊಂದು ಕ್ಷಣವನ್ನು ಸಫಲ ಮಾಡಿಕೊಳ್ಳುವ ದಿನಗಳಾಗಿವೆ. ಈಗಿನ ಒಂದು ಕ್ಷಣದಿಂದ ಬಹಳ ಲಾಭವನ್ನು ಪಡೆಯಬಹುದು ಮತ್ತು ನಷ್ಟವನ್ನೂ ಪಡೆಯಬಹುದು. ಒಂದು ಕ್ಷಣದಲ್ಲಿ ಅನೇಕ ವರ್ಷಗಳ ಸಂಪಾದನೆಯನ್ನು ಕಳೆದುಕೊಳ್ಳಬಹುದು. ಆದ್ದರಿಂದ ಇಲ್ಲಿಯ ಒಂದು ಕ್ಷಣ ಇಷ್ಟು ಶ್ರೇಷ್ಠವಾಗಿದೆ.

ತ್ಯಾಗದಿಂದಲೇ ಭಾಗ್ಯವಾಗುತ್ತದೆ. ಆದರೆ ತ್ಯಾಗ ಮಾಡಿದ ಮೇಲೆ ಮನಸ್ಸಿನಲ್ಲಿಯೂ ಸಂಕಲ್ಪ ಉತ್ಪನ್ನವಾಗಬಾರದು. ಬಲಿ ಕೊಟ್ಟ ಮೇಲೆ ಸ್ವಲ್ಪವಾದರೂ ಚೀರಾಟ ಅಥವಾ ಕಣ್ಣೀರು ಬಂದರೆ ಅದನ್ನು ದೇವಿಗೆ ಸ್ವೀಕಾರ ಮಾಡಲಾಗುವುದಿಲ್ಲ. ಒಂದು ಹೊಡೆತಕ್ಕೆ ಯಾವುದೇ ವಸ್ತುವು ನಾಶ ಮಾಡುವುದಕ್ಕೂ, ಬಾರಿಬಾರಿ ಕತ್ತರಿಸುವುದಕ್ಕೂ ಅಂತರವಿದೆಯಲ್ಲವೇ? ಬಲಿ ಎಂದರೆ ಒಂದೇ ಪೆಟ್ಟಿಗೆ  ಸಮಾಪ್ತಿಯಾಗುವುದು. ಬಾಪ್ ದಾದಾರಿಗೂ ಎಂತಹ ಮಕ್ಕಳು ಸ್ವೀಕಾರ ಆಗುವರು? ಯಾರಿಗೆ ಮನಸ್ಸಿನಲ್ಲಿಯೂ ಸಂಕಲ್ಪ ಬರುವುದಿಲ್ಲವೋ ಅವರನ್ನೇ "ಮಹಾಬಲಿ" ಎಂದು ಹೇಳಲಾಗುತ್ತದೆ. ಇಂತಹ ಮಹಾನ್ ಬಲಿಗೆ ಮಹಾನ್ ಬಲದ ಪ್ರಾಪ್ತಿಯಾಗುತ್ತದೆ. ಸರ್ವಶಕ್ತಿವಂತನ ಮಕ್ಕಳಾಗಿ ಶಕ್ತಿಯಿಲ್ಲವೇ, ತಂದೆಯ ಪೂರ್ಣ ಆಸ್ತಿಗೆ ಅಧಿಕಾರಿಗಳಾಗಬೇಕಲ್ಲವೇ? ಸರ್ವಶಕ್ತಿವಂತ ತಂದೆಯ ಸರ್ವಶಕ್ತಿಗಳ ಆಸ್ತಿ, ಜನ್ಮಸಿದ್ಧ ಅಧಿಕಾರ ಸದಾ ತಮ್ಮ ಸಮ್ಮುಖದಲ್ಲಿರಬೇಕು. ಸರ್ವಶಕ್ತಿವಂತನ ಮುಂದೆ ದುರ್ಬಲತೆ ನಿಲ್ಲಲು ಸಾಧ್ಯವೇ? ಇಂದಿನಿಂದ ದುರ್ಬಲತೆ ಎಂಬ ಮಾತೇ ಇಲ್ಲ. ಕೇವಲ ಶಕ್ತಿಯರೇ ಅಲ್ಲ, ಪಾಂಡವರು ಸಹ ಶಕ್ತಿರೂಪವಾಗಿದ್ದಾರೆ. ಒಂದು ದೀಪದಿಂದ ಅನೇಕ ದೀಪಗಳು ಬೆಳಗುತ್ತವೆ.

(ವೈದ್ಯರೊಂದಿಗೆ) ಡಬಲ್ ಸರ್ಜರಿ ಮಾಡುತ್ತೀರಾ? ಶರೀರದ ಮತ್ತು ಮನಸ್ಸಿನ ಎರಡೂ ಮಾರ್ಗಗಳನ್ನು ಹೇಳಲು ಇನ್ನೂ ಒಳ್ಳೆಯ ಅವಕಾಶ ಸಿಗುತ್ತದೆ. ಯಾವ ರೀತಿ ಸ್ಥೂಲ ಸರ್ವಿಸ್ ಮಾಡುವುದರಿಂದ ಸಂಬಳ ಸಿಗುತ್ತದೆಯೋ ಹಾಗೆಯೇ ಈಶ್ವರೀಯ ಸರ್ವಿಸ್ ಮಾಡುವುದರಿಂದ ಯಾವ ಸಂಬಳ ಸಿಗುತ್ತದೆ? (ಸ್ವರ್ಗದ ಚಕ್ರವರ್ತಿತ್ವ ಸಿಗುತ್ತದೆ). ಭವಿಷ್ಯವಂತೂ ತಯಾರಾಗುತ್ತದೆ ಆದರೆ ಇಲ್ಲಿ ಏನು ಸಿಗುತ್ತದೆ? ಪ್ರತ್ಯಕ್ಷ ಫಲದ ಅನುಭವವಾಗುತ್ತದೆಯೇ? ಭವಿಷ್ಯವಂತೂ ತಯಾರಾಗುತ್ತದೆ ಆದರೆ ಭವಿಷ್ಯಕ್ಕಿಂತಲೂ ಹೆಚ್ಚು ಈಗಿನ ಪ್ರಾಪ್ತಿಯಿದೆ. ಈಗ ಸಿಗುವ ಈ ಈಶ್ವರೀಯ ಅತೀಂದ್ರಿಯ ಸುಖ ಭವಿಷ್ಯದಲ್ಲಿ ಸಿಗುವುದಿಲ್ಲ. ಈ ಅತೀಂದ್ರಿಯ ಸುಖ ಇಡೀ ಕಲ್ಪದಲ್ಲಿ ಎಂದಿಗೂ ಸಿಗಲಾರದು. ಇಂತಹ ಖಜಾನೆ ಈಗ ತಂದೆಯಿಂದ ಸಿಗುತ್ತದೆ. ಅನೇಕ ಜನ್ಮ ಇಂದ್ರಿಯಗಳ ಸುಖ ಮತ್ತು ಒಂದು ಕ್ಷಣದಲ್ಲಿ ಅತೀಂದ್ರಿಯ ಸುಖದ ಅನುಭವವಾಗುತ್ತದೆಯೇ? ಶಿವತಂದೆಯನ್ನು ಯುಗಲ್ ಮಾಡಿಕೊಂಡಿರುವಿರಾ?ದೇಹಧಾರಿ ಯುಗಲ್ ಸುಖದಲ್ಲಿ ಜೊತೆಗಾರರು ಆದರೆ ಪರಮಾತ್ಮ ದುಃಖದ ಸಮಯದಲ್ಲಿ ಜೊತೆಗಿರುತ್ತಾರೆ. ಇಂತಹ ಯುಗಲ್ ನನ್ನು ಒಂದು ಕ್ಷಣವೂ ಬೇರೆ ಮಾಡಬಾರದು. ಜೊತೆಗಿಟ್ಟುಕೊಳ್ಳುವುದು ಎಂದರೆ ಶಕ್ತಿರೂಪವಾಗುವುದು, ಈ ಬ್ರಾಹ್ಮಣ ಪರಿವಾರವನ್ನು ನೋಡಿ, ಇಷ್ಟು ದೊಡ್ಡ ಪರಿವಾರ ಎಂದಾದರೂ ಸಿಗುತ್ತದೆಯೇ? ಕೇವಲ ಈ ಸಂಗಮದಲ್ಲಿಯೇ ಇಷ್ಟು ದೊಡ್ಡ ಪರಿವಾರ ಸಿಗುತ್ತದೆ. ನಾವು ಇಷ್ಟು ದೊಡ್ಡ ಪರಿವಾರದವರು ಎಂಬ ನಶೆಯಿರುತ್ತದೆಯೇ? ಯಾರು ಎಷ್ಟು ದೊಡ್ಡ ಪರಿವಾರದವರಾಗಿರುತ್ತಾರೆಯೋ ಅಷ್ಟು ಅವರಿಗೆ ಖುಷಿಯಿರುತ್ತದೆ. ಇಡೀ ಜಗತ್ತಿನಲ್ಲಿ ಕೆಲವರಿಗೆ ಮಾತ್ರ ಇಷ್ಟು ದೊಡ್ಡ ಪರಿವಾರ ಸಿಗುತ್ತದೆ. ಆದ್ದರಿಂದ ಈ ನಿಶ್ಚಯ ಮತ್ತು ನಶೆಯಿರಬೇಕು. **ಕೋಟಿಯಲ್ಲಿ ಕೆಲವರಾದ ನಾವು ಗಾಯನದಲ್ಲಿ ಬರುವಂತಹ ಆತ್ಮರಾಗಿದ್ದೇವೆ.** ಎಂಬ ನಶೆ ಪ್ರತಿಯೊಬ್ಬರಿಗೂ ಇರಬೇಕು. ಇಂತಹ ಸೌಭಾಗ್ಯ ಸಿಗುವುದೆಂದು ಎಂದಾದರೂ ಯೋಚಿಸಿದ್ದೀರಾ? ಅನಿರೀಕ್ಷಿತ ಲಾಟರಿ ಸಿಕ್ಕಿದೆ. ಲಾಟರಿಯ ಖುಷಿಯಿರುತ್ತದೆಯಲ್ಲವೇ? ಅದು ಮತ್ತೆ ಎಂದೂ ನಾಶವಾಗದಂತಹ ಅವಿನಾಶಿ ಲಾಟರಿಯಾಗಿದೆ. ಇಂತಹ ಲಾಟರಿ ನಮಗೆ ಸಿಕ್ಕಿದೆ ಎಂಬ ನಶೆಯಿರುತ್ತದೆಯೇ? ಮೂಲೆ ಮೂಲೆಯಿಂದ ಬಾಪ್ ದಾದಾ ಯಾರನ್ನು ಆರಿಸಿದ್ದಾರೆ ನೋಡಿ, ಆರಿಸಿದ ರತ್ನಗಳಲ್ಲಿ ತಾವು ವಿಶೇಷವಾಗಿದ್ದೀರಿ ಇದು ನೆನಪಿರುತ್ತದೆಯೇ? ಬಾಪ್ ದಾದಾರಿಗೆ ಯಾವ ರತ್ನ ಹಿಡಿಸುತ್ತದೆ? ಸಾಧಾರಣವಾಗಿ ಇರುವವರು. ಇಂತಹ ಖುಷಿ ಸದಾ ಅವಿನಾಶಿಯಾಗಿರಲಿ. ಹೇಗೆ ದೀಪ ಸದಾ ಬೆಳಗಿರಲು

ಗಮನವಿಡಲಾಗುತ್ತದೆ. ತುಪ್ಪ ಮತ್ತು ಬತ್ತಿ ಈ ಎರಡು ವಸ್ತುಗಳ ಕಡೆಗೆ ಯೋಚನೆಯಿರುತ್ತದೆ. ಅದರಂತೆ ಇಲ್ಲಿಯೂ ಖುಷಿಯ ದೀಪ ಸದಾ ಬೆಳಗುತ್ತಿರಬೇಕು ಅದಕ್ಕಾಗಿ ಎರಡು ಮಾತುಗಳನ್ನು ಗಮನವಿಟ್ಟುಕೊಳ್ಳಬೇಕು. ಜ್ಞಾನದ ತುಪ್ಪ ಮತ್ತು ಯೋಗದ ಬತ್ತಿ, ಒಂದು ವೇಳೆ ಈ ಎರಡೂ ಸರಿಯಾಗಿದ್ದರೆ ದೀಪ ಅವಿನಾಶಿಯಾಗಿರುತ್ತದೆ, ಎಂದೂ ಆರಿ ಹೋಗುವುದಿಲ್ಲ.

ಸಂಗಮಯುಗದಲ್ಲಿ 15 ದಿನಗಳೂ ಕೂಡಾ ಜಾಸ್ತಿಯೇ. ನಾವು 15 ದಿನಗಳ ಮಕ್ಕಳು ಎಂದು ತಿಳಿಯಬೇಡಿ ಆದರೆ ಸಂಗಮದ ಸಮಯವೇ ಈಗ ಬಹಳ ಕಡಿಮೆಯಿದೆ. ಈ ಕಡಿಮೆ ಲೆಕ್ಕದಲ್ಲಿ 15 ದಿನಗಳು ಕೂಡ ಹೆಚ್ಚೇ ಆಯಿತು. ಆದ್ದರಿಂದ ಈಗ ಕೊನೆಗೆ ಬಂದವರು ತೀವ್ರವಾಗಿ ಹೋಗಬೇಕೆಂದು ಯೋಚಿಸಿರಿ. ಅಗಲಿದವರು ಬರುತ್ತಲೇ ತೀವ್ರ ಪುರುಷಾರ್ಥದಲ್ಲಿ ತೊಡಗುತ್ತಾರೆ. ಮಕ್ಕಳು ಸಾಹಸವನ್ನಿಟ್ಟುಕೊಂಡರೆ ತಂದೆ ಸಹಯೋಗ ಕೊಡುತ್ತಾರೆ. ಒಬ್ಬ ಕುಮಾರಿ 100 ಬ್ರಾಹ್ಮಣರಿಗಿಂತ ಉತ್ತಮವೆಂದು ಗಾಯನ ಮಾಡಲ್ಪಟ್ಟಿದೆ. ಒಬ್ಬರಲ್ಲಿ 100ರ ಶಕ್ತಿ ತುಂಬಿದರೆ ಏನು ಮಾಡಲು ಅಸಾಧ್ಯ ಹೇಳಿ. ಕೇವಲ ತಮ್ಮ ಹೆಜ್ಜೆಯನ್ನು ಗಟ್ಟಿ ಮಾಡಿಕೊಳ್ಳಬೇಕು. ಯಾರು ಎಷ್ಟು ಅಲುಗಾಡಿಸಿದರೂ ಅಲುಗಾಡಬಾರದು. ಅಚಲಗಡ ನಿಮ್ಮ ಸ್ಮೃತಿಚಿಹ್ನೆ ಆಗಿದೆಯಲ್ಲವೇ? ಅಚಲ ಎಂದರೆ ಯಾರೂ ಅಲುಗಾಡಿಸಲಾರರು. ಮೂರು ತಿಂಗಳಲ್ಲಿ ಮೂರರ ವಾರಸತ್ವವನ್ನು ಪಡೆದಿದ್ದೀರಾ? ಬಾಪ್ ದಾದಾ ಯಾವ ಮೂರು ಆಸ್ತಿಗಳನ್ನು ಕೊಡುತ್ತಾರೆ? ಸುಖ, ಶಾಂತಿ ಮತ್ತು ಶಕ್ತಿ ಇಲ್ಲಿ ಎಷ್ಟು ಅಧಿಕಾರವನ್ನು ಪಡೆಯುವಿರೋ ಅಷ್ಟು ಅಲ್ಲಿ ರಾಜ್ಯದ ಅಧಿಕಾರಿಗಳಾಗುವಿರಿ. ಸಂಪೂರ್ಣ ಅಧಿಕಾರ ಪಡೆಯುವ ಗುರಿಯಿರಬೇಕು, ಏಕೆಂದರೆ ತಂದೆಯೂ ಸಂಪೂರ್ಣರಾಗಿದ್ದಾರಲ್ಲವೇ?

ನಿಮ್ಮ ಯುಗಲ್ ಇದ್ದರೂ ಒಂಟಿಯಾಗಿರುವಿರೋ ಅಥವಾ ದಂಪತಿಗಳ ರೂಪದಲ್ಲಿರುತ್ತೀರೋ? ಒಂಟಿಯಾದ ರೂಪ ಯಾವುದು? ಆತ್ಮ ಒಂಟಿಯಾಗಿದೆಯಲ್ಲವೇ? ಬರುವುದು ಒಂಟಿಯಾಗಿ, ಹೋಗುವುದು ಒಂಟಿಯಾಗಿ. ಆದ್ದರಿಂದ ಯುಗಲ್ ರೂಪದಲ್ಲಿ ಪಾತ್ರ ಅಭಿನಯಿಸುತ್ತಿದ್ದರೂ ಆತ್ಮಿಕ ಸ್ಥಿತಿಯಲ್ಲಿ ಇರಬೇಕು. ಅರ್ಥಾತ್ ಒಂಟಿಯಾಗುವುದು ನಂತರ ಆತ್ಮಿಕ ದಂಪತಿಗಳಾಗುವುದು. ಆಗ ತಂದೆ ಮತ್ತು ಮಕ್ಕಳು. ಅದಂತೂ ದೇಹದ ದಾಂಪತ್ಯ, ಇದು ಆತ್ಮ ಮತ್ತು ಪರಮಾತ್ಮರ ದಾಂಪತ್ಯವಾಗಿದೆ. ಆತ್ಮ ಪ್ರಿಯತಮೆ, ಸೀತೆ ಎಂದು ಹೇಳುತ್ತಾರೆ. ಪರಮಾತ್ಮ ಪ್ರಿಯತಮ, ರಾಮನಾಗಿದ್ದಾನೆ. ಹಾಗಾದರೆ ಆತ್ಮಿಕ ಯುಗಲ್ ಮೂರ್ತಿಯಾಗಬೇಕು. ದೇಹದ ಯುಗಲ್ ರೂಪವಲ್ಲ. ದೇಹಧಾರಿಯ ಯುಗಲ್ ರೂಪ ಸಮಾಪ್ತಿಯಾಯಿತು. ಅನೇಕ ಜನ್ಮ ದೇಹಧಾರಿಗಳ ಯುಗಲ್ ರೂಪ ನೋಡಿದ್ದಾಯಿತು. ಈಗ ಆತ್ಮ ಮತ್ತು ಪರಮಾತ್ಮರ ಯುಗಲ್ ರೂಪವಾಗಬೇಕು. ಇಂತಹ ಸ್ಥಿತಿಯಲ್ಲಿ ಇರುತ್ತೀರಾ? ಇಂತಹ ಅಮೂಲ್ಯ ಯುಗಲ್ ರೂಪದ ಮುಂದೆ ಆ ಯುಗಲ್ ಏನೂ ಅಲ್ಲ. ಆಗ ದೇಹದ ಭಾವನೆ ನಾಶವಾಗುತ್ತದೆ. ಎಲ್ಲಕ್ಕಿಂತ ಪ್ರಿಯವಾದ ವಸ್ತು ಯಾವುದು? ಪ್ರಿಯವಾದ ವಸ್ತು ಹಿಡಿಸುವುದಿಲ್ಲವೇ? ಹಾಗಾದರೆ ಆ ಪ್ರಿಯ ವಸ್ತುವನ್ನು ಬಿಟ್ಟು ಬೇರೆಯವರನ್ನು ಹೇಗೆ ಪ್ರಿಯವಾಗಿ ಮಾಡಿಕೊಳ್ಳಲು ಸಾಧ್ಯ? ಒಂಟಿಯಾಗಬೇಕು, ನಂತರ ಯುಗಲ್ ಆಗಬೇಕು.

ಕೆಲವರಿಗೆ ಬರುತ್ತಲೇ ಲಾಟರಿ ಸಿಗುತ್ತದೆ. ಕೆಲವರಿಗೆ ಪ್ರಯತ್ನ ಮಾಡಿದಾಗ ಲಾಟರಿ ಸಿಗುತ್ತದೆ. ಇಂತಹ ಉನ್ನತ ಭಾಗ್ಯಶಾಲಿ ಎಂದು ತಮ್ಮನ್ನು ತಿಳಿದುಕೊಳ್ಳುತ್ತೀರಾ? ಕುಮಾರರಿಗೂ ಸರಳ ಮಾರ್ಗವಿದೆ ಏಕೆಂದರೆ ಉಲ್ಟಾ ಏಣಿಯನ್ನು ಏರಿ ಮತ್ತೆ ಇಳಿಯುವ ಅಗತ್ಯವಿಲ್ಲ. ಆದ್ದರಿಂದ ಕುಮಾರ - ಕುಮಾರಿಯರಿಗೆ ಇನ್ನೂ ಸಹಜವಾಗಿದೆ. ಯಾರು ಬಂಧನಮುಕ್ತರೋ ಅವರು ಬೇಗನೆ ಓಡಬಹುದು. ಆದ್ದರಿಂದ ಎಲ್ಲಾ ಮಾತುಗಳಲ್ಲಿಯೂ ನಿರ್ಬಂಧನರಾಗಿರಿ. ಎಂತಹದೇ ಪರಿಸ್ಥಿತಿಯಲ್ಲಿ ತಮ್ಮ ಸ್ಥಿತಿ ಶ್ರೇಷ್ಠವಾಗಿರಲಿ. ಶ್ರೇಷ್ಠ ಜೀವನದ ಗುರಿಯಿಂದ ದೂರವಾಗಬಾರದು. ಒಳ್ಳೆಯದು.

ಅವ್ಯಕ್ತ ಮುರಳಿ 23-01-1970.

***ಸೇವೆಯಲ್ಲಿ ಸಫಲತೆಯನ್ನು ಪಡೆಯುವ ಯುಕ್ತಿಗಳು***

ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಶಕ್ತಿ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಅವ್ಯಕ್ತ ಸ್ಥಿತಿಯಲ್ಲಿದ್ದು ಉಪನ್ಯಾಸ ಮಾಡಿ ಸಮ್ಮೇಳನದ ಸಫಲತೆಯನ್ನು ಪಡೆದಿದ್ದೇನೆ.

2. ನಾನು ಅವ್ಯಕ್ತ ಸ್ಥಿತಿಯಲ್ಲಿದ್ದು ಮಾತನಾಡಿರುವ ಮಾತು ದೂರದಿಂದಲೂ "ಇವರು ಧ್ವನಿಗೆ ಅತೀತವಾಗಿರುವ ಸ್ಥಿತಿಯಲ್ಲಿದ್ದು ಅದ್ಭುತವಾಗಿ ಮಾತನಾಡುತ್ತಿದ್ದಾರೆ" ಎಂದು ಎಲ್ಲರೂ ಅನುಭವ ಮಾಡಿ ಅವರ ಮನಸ್ಸಿನಾಳಕ್ಕೆ ಸೇರಿಕೊಂಡಿವೆ.

3. ನಾನು ಚೈತನ್ಯ ಚಿತ್ರದಂತೆ ತಯಾರಾಗಿ ಕಡಿಮೆ ಮಾತನಾಡಿ, ದೊಡ್ಡ ಕರ್ತವ್ಯವನ್ನು ಮಾಡಿ ತೋರಿಸುವ ಅವ್ಯಕ್ತ ಚೈತನ್ಯ ಸ್ವರೂಪ.

4. ನಾನು ಅವ್ಯಕ್ತ ಸ್ಥಿತಿಯಿಂದ ತಂದೆಯನ್ನು ತಿಳಿದುಕೊಂಡು ಆದಿಯಿಂದ ಸಹಜವಾಗಿ ಮತ್ತು ನಿರ್ವಿಘ್ನವಾಗಿ ನಡೆಯುತ್ತಿದ್ದೇನೆ.

5. ನಾನು ಸ್ವಯಂ ಸಹಜ ಪುರುಷಾರ್ಥ & ಅವ್ಯಕ್ತ ಶಕ್ತಿಯಿಂದ ಇರುತ್ತಾ ಇತರರನ್ನು ಕೂಡ ನನ್ನ ಸಮಾನವಾಗಿ ತಯಾರು ಮಾಡಿದ್ದೇನೆ.

6. ನಾನು ಯಾವ ವಿಷಯವನ್ನಾದರೂ ಬದಲಾಯಿಸಿಕೊಂಡು, ಉನ್ನತ ಸ್ಥಿತಿಯಿಂದ ಸಫಲತೆಯನ್ನು ಹೊಂದಿ ಎಲ್ಲರಲ್ಲಿ ಆತ್ಮಿಕ ಶಕ್ತಿಯನ್ನು ಅನುಭವ ಮಾಡಿಸಿದ್ದೇನೆ.

7. ನಾನು ಯಾವುದಾದರೂ ಸೇವಾ ಕಾರ್ಯಕ್ರಮದ ಮೊದಲು ವಾಯುಮಂಡಲವನ್ನು ತಪ್ಪದೇ ಅವ್ಯಕ್ತವಾಗಿ ತಯಾರು ಮಾಡಿಕೊಂಡು, ಯಾರು ಎದುರಿಗೆ ಬಂದರೂ ಮೊದಲು ಅವ್ಯಕ್ತ ಪ್ರಭಾವ ಬೀರಿ ಪ್ರತಿ ಸಮ್ಮೇಳನದ (ಭಟ್ಟಿ) ಸಫಲತೆಯನ್ನು ಪಡೆದಿದ್ದೇನೆ.

8. ನಾನು ಸಾಕಾರ ತಂದೆಯ ಸಮಾನವಾಗಿ ನನ್ನನ್ನು ದೂರದಿಂದ ನೋಡಿದರೂ ನನ್ನ ವ್ಯಕ್ತ ಶರೀರದಿಂದ ಅಲೌಕಿಕತೆ ಕಾಣಿಸುತ್ತದೆ.

9. ನಾನು ಬುದ್ಧಿ ಲೈನ್ ಮತ್ತು ಪುರುಷಾರ್ಥದ ಲೈನ್ ಅನ್ನು ಸ್ಪಷ್ಟವಾಗಿಟ್ಟುಕೊಂಡು ಸಂಕಲ್ಪವೆಂಬ ಸ್ವಿಚ್ ಹಾಕುತ್ತಿದ್ದಂತೆಯೇ ಎಲ್ಲರನ್ನು ಸಹಾಯಕಾರಿಯನ್ನಾಗಿ ಮಾಡಿಕೊಂಡಿದ್ದೇನೆ.

10. ನಾನು ಶರೀರದಲ್ಲಿ ಇರುತ್ತಾ ಅವ್ಯಕ್ತ ಸ್ಥಿತಿಯ ಗಂಟೆಯನ್ನು ಬಾರಿಸುವ ಗಡಿಯಾರವಾಗಿ ಎಲ್ಲರಿಗೂ ಅವ್ಯಕ್ತ ಸ್ಥಿತಿಯ ಪಾಠವನ್ನು ಪ್ರಾಯೋಗಿಕವಾಗಿ ಕಲಿಸಿದ್ದೇನೆ.

11. ನಾನು ಬಾಪ್ ದಾದಾ ಮತ್ತು ದೈವೀ ಪರಿವಾರದ ಸ್ನೇಹವೆಂಬ ಸೂತ್ರದಲ್ಲಿ ಪೋಣಿಸಲ್ಪಟ್ಟಿರುವ ಅಮೂಲ್ಯವಾದ ಮಣಿ ಎಂಬ ನಶೆಯಲ್ಲಿ ಇದ್ದೇನೆ.

12. ನನ್ನ ಚರಿತ್ರೆಯನ್ನು ಪ್ರಭಾವಶಾಲಿಯಾಗಿ ಮಾಡಿಕೊಂಡು ಪರಿವರ್ತನೆ ಹೊಂದಿ, ನಿರಹಂಕಾರಿ ಸ್ವರೂಪದಿಂದ ಎಲ್ಲರನ್ನೂ ಆಕರ್ಷಣೆ ಮಾಡಿದ್ದೇನೆ.

13. ನಾನು ಸೇವಾ ಕೇಂದ್ರಗಳಲ್ಲಿ ವಾಯುಮಂಡಲವನ್ನು ಅವ್ಯಕ್ತವಾಗಿ ಮತ್ತು ಆಕರ್ಷಣೀಯವಾಗಿ ತಯಾರು ಮಾಡಿ ಎಲ್ಲರಿಗೂ ದೂರದಿಂದಲೇ ಅವ್ಯಕ್ತ ಸ್ಥಿತಿಯ ಅನುಭವವನ್ನು ಮಾಡಿಸಿ ದೀಪದಂತೆ ಪ್ರಕಾಶಿಸುತ್ತಾ ಸಫಲತೆಯನ್ನು ಹೊಂದಿದ್ದೇನೆ.

14. ನಾನು ಸದಾ ಅವ್ಯಕ್ತ ಆಕರ್ಷಣೆಯ ಸಾಂಗತ್ಯದಲ್ಲಿ ಇದ್ದೇನೆ.

15. ನಾನು ಲೌಕಿಕ ಪರಿವಾರವನ್ನು ಅಲೌಕಿಕ ಪರಿವಾರದಲ್ಲಿ ಪರಿವರ್ತನೆ ಮಾಡಿಕೊಂಡು ಮರುಜೀವಿಯಾಗಿ ಪೂರ್ವ ಜೀವನದ ಸ್ಮೃತಿ ಮತ್ತು ದೃಷ್ಟಿಯನ್ನು ಸಮಾಪ್ತಿ ಮಾಡಿದ್ದೇನೆ.

16. ನಾನು ಲೌಕಿಕದಲ್ಲಿ ಅಲೌಕಿಕತೆಯನ್ನು ತುಂಬಿಕೊಂಡು ನನ್ನನ್ನು ಮತ್ತು ಇತರರನ್ನು ಶರೀರ ಅಭಿಮಾನದಿಂದ ಬೇರ್ಪಡಿಸಿ ಆತ್ಮನ ಸಂಬಂಧ ಪವರ್ ಹೌಸ್ ನೊಂದಿಗೆ ಜೋಡಿಸುವ ಸೇವೆ ಮಾಡಿದ್ದೇನೆ.

17. ನಾನು ಆತ್ಮಾಭಿಮಾನಿಯಾಗಿ ಪ್ರತಿಕ್ಷಣ ಬಾಪ್ ದಾದಾರವರಿಂದ ಆಶೀರ್ವಾದಗಳನ್ನು ಪಡೆದಿದ್ದೇನೆ.

18. ನಾನು ಶಿವ ಪರಮಾತ್ಮನನ್ನು ಸದಾ ಯುಗಲ್ (ದಂಪತಿಗಳ ರೂಪದಲ್ಲಿ) ಮಾಡಿಕೊಂಡು ಅಲ್ಲಿ (ಸತ್ಯಯುಗದಲ್ಲಿ) ದಂಪತಿಗಳ ರೂಪದಲ್ಲಿ ರಾಜ್ಯ ಮಾಡಿದ್ದೇನೆ.

19. ನನ್ನ ಸ್ಥಿತಿ ಮತ್ತು ಕರ್ಮ ಎರಡೂ ದೃಢವಾಗಿ ಇವೆ.

20. ನಾವು( ಶಿವಪರಮಾತ್ಮ+ ನಾನು) ದಂಪತಿಗಳು ಎಂಬ ಸ್ಮೃತಿಯನ್ನಿಟ್ಟು ಧೈರ್ಯ ಮತ್ತು ಶಕ್ತಿಯಿಂದ ಮಾಯೆಯನ್ನು ಸಮಾಪ್ತಿ ಮಾಡಿದ್ದೇನೆ.

21. ನನ್ನ ಗುರಿ ಲಕ್ಷ್ಮೀನಾರಾಯಣ ಆಗುವುದು. ಲಕ್ಷ್ಯದೊಂದಿಗೆ ಲಕ್ಷಣಗಳನ್ನು (ದೈವೀ ಗುಣಗಳನ್ನು) ಧಾರಣೆ ಮಾಡಿದ್ದೇನೆ.

22. ನಾನು ಹೆಚ್ಚು ಪುರುಷಾರ್ಥ ಮಾಡುವ ದೃಢಸಂಕಲ್ಪವನಿಟ್ಟು ಸಹಾಯವನ್ನು ಪಡೆದಿದ್ದೇನೆ.

23. ನಾನು ಯಾವುದೇ ಶಾರೀರಿಕ ಸೇವೆಯನ್ನಾದರೂ (ಉದ್ಯೋಗ) ಅಲೌಕಿಕ ಸೇವೆಗಾಗಿಯೇ ಮಾಡುತ್ತಿದ್ದೇನೆ ಎಂದು ಭಾವಿಸುತ್ತಿದ್ದೇನೆ.

24. ನಾನು ಯೋಗಬಲ ಮತ್ತು ಜ್ಞಾನಬಲ ಈ ಎರಡರ ಸಮಾನತೆಯಿಂದ ಸೇವೆಯನ್ನು ಮಾಡಿ ಸಫಲತೆಯನ್ನು ಪಡೆದಿದ್ದೇನೆ.

25. ನಾನು ಸೇವೆಯಲ್ಲಿ ವ್ಯಸ್ತವಾಗಿ, ದೃಢ ನಿಶ್ಚಯದಿಂದ ವಿಘ್ನಗಳನ್ನು ಸ್ವತಹವಾಗಿ ತೊಲಗಿಸಿಕೊಂಡಿದ್ದೇನೆ.

26. ನಾನು ಬ್ರಹ್ಮಾತಂದೆಯ ಸಮಾನವಾಗಿ ದಣಿವರಿಯದ ಏಕರಸ ಸ್ಥಿತಿ ಸ್ವರೂಪ.

27. ನಾನು ನನ್ನ ಚರಿತ್ರೆಯಿಂದ ವಿಚಿತ್ರತಂದೆ (ಶಿವ ತಂದೆ) ಯ ಸ್ಮೃತಿಯನ್ನು, ನಯನಗಳಿಂದ ಶಿವ ತಂದೆಯ ಚಿತ್ರವನ್ನು ತೋರಿಸಿದ್ದೇನೆ.

28. ನಾನು ಸರ್ವಪ್ರಾಪ್ತಿಗಳನ್ನು ಪಡೆದಿರುವ ಮಧುಬನ ನಿವಾಸಿ.

29. ನಾನು ಸದಾ ಸಂಪೂರ್ಣತೆಯ ಪುರುಷಾರ್ಥದಿಂದ ಸಮಯವೆಂಬ ಖಜಾನೆಯನ್ನು ಸಂಪೂರ್ಣವಾಗಿ ಉಪಯೋಗಿಸಿಕೊಂಡು ಒಂದೊಂದು ಕ್ಷಣದಲ್ಲಿ ಅನೇಕ ವರ್ಷಗಳ ಸಂಪಾದನೆಯನ್ನು ಮಾಡಿಕೊಂಡಿದ್ದೇನೆ.

30. ನಾನು ತಂದೆಯನ್ನು ಜೊತೆಯಾಗಿ ಇಟ್ಟುಕೊಂಡು ಎಂತಹ ಪರಿಸ್ಥಿತಿ ಬಂದರೂ ನನ್ನನ್ನು ನಾನು ಗಟ್ಟಿಯಾಗಿ ಮಾಡಿಕೊಂಡು, ಇತರರಿಗೆ ನನ್ನ ಗುಣ ದಾನ ಮಾಡಿ ಭವಿಷ್ಯತ್ತಿನಲ್ಲಿ ಉನ್ನತ ಪ್ರಾಲಬ್ಧವನ್ನು ಪಡೆದಿದ್ದೇನೆ.

31. ನಾನು ಅವಿನಾಶಿ ಮಧುರತೆ ಮತ್ತು ಸ್ನೇಹದ ಶಕ್ತಿಯ ವರದಾನಿ.

32. ನಾನು ವರದಾನಗಳೊಂದಿಗೆ ಜೋಳಿಗೆಯನ್ನು ಖಾಲಿಯಾಗದಷ್ಟು ತುಂಬಿಕೊಂಡಿದ್ದೇನೆ.

33. ನಾನು ಒಂದೇ ಏಟಿಗೆ ಬಲಿಯಾಗಿರುವ ಮಹಾಬಲಿ.

34. ನಾನು ತಂದೆಯ ಸರ್ವ ಶಕ್ತಿಗಳು & ಆಸ್ತಿಗೆ ಅಧಿಕಾರಿಯಾಗಿ ಬಲಹೀನತೆಗಳನ್ನು ಸಮಾಪ್ತಿ ಮಾಡಿದ್ದೇನೆ.

35. ನಾನು ಈಶ್ವರೀಯ ಸೇವೆ ಮಾಡಿ ಭವಿಷ್ಯ ಫಲವಾಗಿ ಸ್ವರ್ಗದ ಚಕ್ರವರ್ತಿತ್ವ ಮತ್ತು ಪ್ರತ್ಯಕ್ಷ ಫಲವಾಗಿ ಈಶ್ವರೀಯ ಸುಖವನ್ನು ಪಡೆದಿದ್ದೇನೆ.

36. ನನ್ನ ಜ್ಞಾನ ಎಂಬ ತುಪ್ಪ ಮತ್ತು ಯೋಗ ಎಂಬ ಬತ್ತಿಯಿಂದ ಸಂತೋಷವೆಂಬ ದೀಪ ಸದಾ ಬೆಳಗುತ್ತಿದೆ.

37. ನಾನು ಯಾರು ಎಷ್ಟೇ ಅಲುಗಾಡಿಸಿದರೂ ಅಲುಗಾಡದ ಅಚಲ ಸ್ವರೂಪ.